# ಹರನಾಮವನು ಬಿಡದೆ .. ..
(ರಾಗ: ಧನ್ಯಾಸಿ)

ಹರನಾಮವನು ಬಿಡದೆ ಜಪಿಸಬಲ್ಲವರ ಭವ
ಮರಣ–ಮಾಯಾ–ಕರ್ಮ–ಮಲ–ಪಾಶಬಂಧ–ಬಹು
ದುರಿತ–ಸಂಸಾರ–ಸಂತಾಪ–ಸಂಚಯವಳಿದು ವರಭೋಗ–ಮೋಕ್ಷವಹುದು ।ಪ।

ಶಿವ ಮಹಾದೇವ ಶಂಕರ ಶರ್ವ ಪಾರ್ವತೀ
ಧವ ನಂದಿವಾಹ ದೇವೇಶಾನುದಕ್ಷ ವಾ
ಸವನತಪದಾಂಭೋಜ ನಗಚಾಪ ನಿರ್ಮಲ ನಿರಾತಂಕ ನೀಲಕಂಠ।
ಭುವನೇಶ ವಿಜಯ ವೇದಾಂಗ ವೈಶ್ರವಣ–ಸಖ
ಪವಮಾನ ಪಂಚಮುಖ ಪಶುಪತಿ ಸಹಸ್ರಾಕ್ಷ
ಭವ ಭರ್ಗ ಭಸಿತಾಂಗ ಭಾಳಲೋಚನ ಮೇರು–ಕಾರ್ಮುಕ ಕಪರ್ದಿಯೆಂದು ॥೧॥

ಸೋಮ ಶಾಂತಾಭಯ ವಿರೂಪಾಕ್ಷ ವಿಶ್ವಾಭಿ
ರಾಮ ಗಂಭೀರ ಕಾಲಾರಿ ಕೂಟಸ್ಥ ವಿಭು
ವಾಮದೇವಾಘೋರ ಪಂಚಾಕ್ಷರೋಂಕಾರ ತತ್ಪುರುಷ ರುದ್ರ ಭದ್ರ
ಭೀಮ ಸದ್ಯೋಜಾತ ಮೃಡ ಮಹಾಕಾಲ ಜಿತ–
ಕಾಮ ಮೃತ್ಯುಂಜಯ ಪುರಾತನ ಪರಾತ್ಪರ ನಿ
ರಾಮಯಾನಂತ–ತೇಜೋರಾಶಿ ಸರ್ವಜ್ಞ ಶಾಶ್ವತ ಕಪಾಲಿಯೆಂದು ॥೨॥

ಶೂಲಿ ಸುಜನೈಕ–ಬಾಂಧವ ಸದಾಶಿವ ಚಂದ್ರ
ಮೌಳಿ ಮಹಿಮೋಗ್ರ–ಚರ್ಮಾಂಬರಾಸುರ–ಶಿರೋ
ಮಾಲಿ ಮಂದಾಕಿನೀಧರ ಮಹೇಶ್ವರ ಮೇಘವಾಹ ಮಂದರನಿವಾಸ।
ನೀಲಲೋಹಿತ ಪಾರಿಜಾತ ಪಾವನ ಲೋಕ
ಪಾಲ ಕೈಲಾಸಮಂದಿರ ಮಂತ್ರಮಯ ಭಕ್ತಿ
ಲೋಲ ಪಂಚಬ್ರಹ್ಮ ಪರನಾದ ಬಿಂದು ಪರಮಾತ್ಮ ಪುರವೈರಿಯೆಂದು ॥೩॥

ವರದ ವಾಗೀಶ ವರ್ಣಾತೀತ ವಂದ್ಯ ಜಯ
ಪರಮ ಪರತರ ಪರಂಜ್ಯೋತಿ ಪರಮಾನಂದ
ನಿರಪಾಯ ನಿರುಪಮ ನಿರಾವರಣ ನಿರ್ಲೇಪ ನಿರವಯುವ ನಿತ್ಯತೃಪ್ತ।
ಉರಗ–ಕಂಕಣ ವಿಶ್ವತೋ–ಬಾಹು ವಿಶ್ವಾತ್ಮ
ಸುರಗಣಾರ್ಚಿತ ಸನಾತನ ಸದಾಗತಿ ಹಂಸ
ಗಿರಿಶ ಗಾಂಗೇಯ–ಪಿತ ಗಣನಾಥ ಜಗದೀಶ ವಿಷಧರ ಪಿನಾಕಿಯೆಂದು ॥೪॥

ಉದಯಾಸ್ತಮಾನದೊಳು ನೂರೆಂಟು ನಾಮವನು
ಪದುಳದಿಂದೋದಿ ಕೇಳಿದವರ್ಗೆ ಶಂಭುಲಿಂ
ಗದ ಕರುಣದಿಂದಿನಿತು ಕೊರತೆಯಿಲ್ಲದೆ ಸಕಲ ಸಂಪದದೊಳೊಂದುಗೂಡಿ।
ಸದಮಲ-ಜ್ಞಾನ-ಸದ್ಭಕ್ತಿಗಳು ಮೇಲೆ ಮೇ
ಲೊದವಿ ಕೈಸಾರುತಿಹವಿಹದಲ್ಲಿ ಪರದೊಳೊಂ
ದಿದ ಗಣಪದವನೈದಿ ನಿಜಸುಖದೊಳಿಹ ಮುಕ್ತಿ ದೊರೆವುದಿದು ಸತ್ಯವೆಂದು ॥೫॥

– ನಿಜಗುಣ ಶಿವಯೋಗಿ, ಕೈವಲ್ಯಪದ್ಧತಿ, ಪದ್ಯ ೫

== ==